For more job news visit : www.kpscvaani.com

ಕರ್ನಾಟಕ ರಾಜ್ಯ ವಕ್ಫ್ ಮಂಡಳಿ

(ವಕ್ಫ್ ಕಾಯ್ದೆ, 1995 (ಕೇಂದ್ರ ಕಾಯ್ದೆ-43/95)ರ ಅನ್ವಯ ಕರ್ನಾಟಕ ಸರ್ಕಾರದಿಂದ ಸ್ಥಾಪಿಸಲಾಗಿದೆ)

''ದರುಲ್ ಔಕಾಫ್'', ನಂ.6, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು -560 052

ವೆಬ್‌ಸೈಟ್ : www.karwakf.org ಇ-ಮೇಲ್ : info@karwakf.org

ಸಂಖ್ಯೆ: ಕೆಎಸ್‌ಬಿಡಬ್ಲ್ಯೂ/ಎಡಿಎಂ/ಸಿಆರ್/24/13-14 ದಿನಾಂಕ: 05.09.2020

ಪ್ರಕಟಣೆ

ಔಕಾಫ್ ಮಂಡಳಿಯಲ್ಲಿನ ಮುಖ್ಯ ಕಾನೂನು ಅಧಿಕಾರಿ, ಕಾನೂನು ಸಲಹೆಗಾರ ಮತ್ತು ಶೀಘ್ರಲಿಪಿಗಾರರ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ **ದಿನಾಂಕ 11.09.2020ರಂದು ಮಧ್ಯಾಹ್ನ 3.00 ಗಂಟೆಗೆ** ನಂ. 06, ಕನ್ನಿಂಗ್‌ಹ್ಯಾಂ ರಸ್ತೆ, ದರುಲ್ ಔಕಾಫ್ ಬಿಲ್ಡಿಂಗ್, ಕರ್ನಾಟಕ ರಾಜ್ಯ ಔಕಾಫ್ ಮಂಡಳಿ ಕಚೇರಿ, ಬೆಂಗಳೂರು ಇಲ್ಲಿ ಸಂದರ್ಶನಕ್ಕೆ ಆಹ್ವಾನಿಸಲಾಗಿದೆ. ಈ ಕೆಳಗೆ ತಿಳಿಸಿರುವಂತೆ ವಿದ್ಯಾರ್ಹತೆ ಮತ್ತು ಅನುಭವ ಹೊಂದಿರುವ ವ್ಯಕ್ತಿಗಳು ಸಂದರ್ಶನಕ್ಕೆ ಹಾಜರಾಗುವುದು.

ಕ್ರ. ಸಂ.	ಹುದ್ದೆ	ಕೆಲಸದ ವಿವರಗಳು	ವಿದ್ಯಾರ್ಹತೆ ಮತ್ತು ಅನುಭವ
1.	ಮುಖ್ಯ ಕಾನೂನು ಅಧಿಕಾರಿ (ಒಂದು ಹುದ್ದೆ)	1. ಕಾನೂನು ವಿಭಾಗದ ಮೇಲ್ವಿಚಾರಣೆ ನೋಡಿಕೊಳ್ಳುವುದು 2. ಪ್ರಮುಖ ವಿಚಾರಗಳ ಬಗ್ಗೆ ಕಾನೂನು ಅಭಿಪ್ರಾಯ ನೀಡುವುದು. 3. ಕಾನೂನು ವಿಚಾರಗಳ ಬಗ್ಗೆ ವಹಿಸಿದ ಯಾವುದೇ ಇತರೆ ಕೆಲಸ. 4. ನ್ಯಾಯಾಲಯದ ಎಲ್ಲಾ ವಿಚಾರಗಳ ಮೇಲ್ವಿಚಾರಣೆ ಮತ್ತು ನಿರ್ವಹಣೆ.	1 ವ್ಯಕ್ತಿಯು ಮನ್ನಣೆ ಪಡೆದ ವಿಶ್ವವಿದ್ಯಾಲಯ ಒಂದರಿಂದ ಕಾನೂನು ಪದವಿ ಹೊಂದಿರಬೇಕು. 2. ನ್ಯಾಯಾಂಗ ಅಧಿಕಾರಿ ಅಥವಾ ವಕೀಲರಾಗಿ ಹದಿನೈದು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯಲ್ಲಿ ವಕೀಲರ ವೃತ್ತಿ ನಡೆಸಿರಬೇಕು. ಕನಿಷ್ಠ ಐದು ವರ್ಷಗಳ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಜಿಲ್ಲಾ ನ್ಯಾಯಾಧೀಶರಿಗೆ ಆದ್ಯತೆ ನೀಡಲಾಗುವುದು.
2	ಕಾನೂನು ಸಲಹೆಗಾರ (ಒಂದು ಹುದ್ದೆ)	ಎಲ್ಲಾ ವಿಚಾರಗಳ ಬಗ್ಗೆ ಕಾನೂನು ಅಭಿಪ್ರಾಯ ತಿಳಿಸುವುದು.	ವ್ಯಕ್ತಿಯು ಕಾನೂನು ವಿಷಯದಲ್ಲಿ ಪದವಿ ಪಡೆದಿರಬೇಕು ಮತ್ತು ವಕೀಲರಾಗಿ ಸಿವಿಲ್ ವಿಚಾರದಲ್ಲಿ ಹತ್ತು ವರ್ಷ-ಗಳಿಗಿಂತ ಕಡಿಮೆಯಿಲ್ಲದ ವೃತ್ತಿ ಅನುಭವ ಹೊಂದಿರಬೇಕು.
3.	ಶೀಘ್ರಲಿಪಿಗಾರರು (ಮೂರು ಹುದ್ದೆಗಳು)	ಸಭೆಗಳು, ವಿಚಾರಣೆಗಳ ಸಂದರ್ಭದಲ್ಲಿ ಹಾಜರಿದ್ದು, ನಡಾವಳಿಗಳನ್ನು ಬರೆದುಕೊಳ್ಳುವುದು ಮತ್ತು ವಹಿಸಿದ ಯಾವುದೇ ಇತರೆ ಕೆಲಸಗಳು	ವ್ಯಕ್ತಿಯು ಪಿಯುಸಿ ಮತ್ತು ಹಿರಿಯ ದರ್ಜೆ ಇಂಗ್ಲೀಷ್ ಮತ್ತು ಕನ್ನಡ ಶೀಘ್ರಲಿಪಿಯಲ್ಲಿ ತೇರ್ಗಡೆಯಾಗಿರಬೇಕು/ ಸೆಕ್ರೆಟೇರಿಯಲ್ ಪ್ರಾಕ್ಟೀಸ್‌ನಲ್ಲಿ ಡಿಪ್ಲೊಮಾ/ ಕಂಪ್ಯೂಟರ್‌ನಲ್ಲಿ ಡಿಪ್ಲೊಮಾ ತೇರ್ಗಡೆಯಾಗಿರಬೇಕು.

ಸಹಿ/-

ಮುಖ್ಯಕಾರ್ಯನಿರ್ವಹಣಾಧಿಕಾರಿ,

ಕರ್ನಾಟಕ ರಾಜ್ಯ ವಕ್ಫ್ ಮಂಡಳಿ